Statement by the Deputy Speaker

re : taking up the matter of Calling Attention Notices every day.

Mr. DEPUTY SPEAKER.—It was stated that Call Attention Notices have been given and that they do not come up. Under Rule 63, one call attention per day can be taken. Sometime back I suggested to the House that if no supplementaries are put or no clarifications are sought, we would like to have more than one at least two or three a day. The contention that they do not come up or taken up is not true. Hon. members should not impute something which is not correct.

Alleged Police Excess on Students in Tiptur

ಶ್ರೀ ಸಿ. ಬೈರೇಗೌಡ (ವೇಮಗಲ್).—ನಾನು ನಿನ್ನೆಯದಿವಸ ರೂಲ್ 50ರ ಪ್ರಕಾರ ಒಂದು ನೋಟೀಸನ್ನು ಕಳುಹಿಸಿದ್ದೇನೆ, ಅದು ಬಹಳ ಪ್ರಾಮುಖ್ಯವಾದಂಥ ವಿಷಯ ಇವತ್ತಿನದಿನ ನಮ್ಮ ರಾಜ್ಯದಲ್ಲಿ ಅನೇಕ ಘಟನೆಗಳು ನಡೆದಿವೆ. ಈ ಘಟನೆಗಳು ಮೊದಲು ಹಾಸನದಲ್ಲಿ ಪ್ರಾರಂಭವಾಗಿ, ಮೊನ್ನೆಯದಿವಸ ಅನೇಕರ್‌ನಲ್ಲಿ ನಡೆದಿದೆ, ಅಲ್ಲಿಂದ ಈಗ ನಮ್ಮ ಜಿಲ್ಲೆಗೆ ಬಂದಿದೆ. ವಿಷಯ ಏನೆಂದರೆ, ನಂಗ್ಲಿ ಪೋಲೀಸ್ ಸ್ಟೇಷನ್‌ನಲ್ಲಿ ಒಬ್ಬ ಸಾಧು ಸಂಶಯಾತ್ಮಕ ರೀತಿಯಲ್ಲಿ ಸತ್ತಿದ್ದಾನೆ. ಅವನ ಹೆಣ, ಪೋಲೀಸ್ ಸ್ಟೇಷನ್‌ನ ಪಕ್ಕದಲ್ಲಿರತಕ್ಕ ಬಾವಿಯಲ್ಲಿ ತೇಡುತ್ತಿದ್ದುದು ಕಂಡುಬಂದಿದೆ. ಅಲ್ಲಿನ ಜನರ ಅಭಿಪ್ರಾಯ ಏನೆಂದರೆ, ಈ ಸಾಧುವಿನ ಸಾವಿಗೆ ಪೋಲೀಸರೇ ಕಾರಣ ಎಂದು. ಈ ಹೆಣವನ್ನು ಬಾವಿಯಿಂದ ತೆಗೆಯಬೇಕಾದರೆ, ಸುಮಾರು ಎರಡು ಸಾವಿರ ಜನ ವಿರೋಧ ಮಾಡಿದ್ದಾರೆ. ಇದನ್ನು ತಾವು ಸರಿಯಾದ ರೀತಿಯಲ್ಲಿ ವಿಚಾರಣೆ ಮಾಡಬೇಕು. ಅಲ್ಲಿ ಜನರ ಅಭಿಪ್ರಾಯ ಏನೆಂದರೆ, ಪೋಲೀಸರು ಈತನನ್ನ ಹೊಡೆದು ಬಾವಿಯಲ್ಲಿ ಹಾಕಿದ್ದಾರೆ.

Mr. DEPUTY SPEAKER.—This can be converted as a Call Attention Notice under Rule 632, and it will serve the purpose. I am happy that the hon. member of the C.P.M. party has felt some sympathy for the Sadhu though idealogically it is very rare.

ಶ್ರೀ ಸಿ. ಬೈರೇಗೌಡ.—ಬರೀ ಸಾಧುವಿನ ಪ್ರಶ್ನೆ ಯಲ್ಲ, ಅಲ್ಲಿರತಕ್ಕ ಸಾಧು ಒಬ್ಬ ಮನುಷ್ಯ ಅವನು ಸತ್ತಿದ್ದಾನೆ.

Mr. DEPUTY SPEAKER.—I know the anxiety of the hon. member and I know the magnitude of it. But it will not come under Rule 50 ; we will get a reply from the Government under Rule 63.

ಶ್ರೀ ಸಿ. ಬೈರೇಗೌಡ.—ಇದರಲ್ಲಿ ಇನ್ನೊಂದು ಸಮಸ್ಯೆ ಏನೆಂದರೆ, ನಾನು ನೋಟೀಸ್‌ನಲ್ಲಿ ಪೂರ್ತಿಯಾಗಿ ಎಲ್ಲಾ ವಿಷಯಗಳನ್ನು ಬರೆದಿಲ್ಲ. ಈತನ ಸಾವಿಗೆ ಕಾರಣ ಏನೆಂದರೆ, ನಂಗ್ಲಿಯ ಪಕ್ಕದಲ್ಲಿ ಒಂದೂ, ಒಂದೂವರೆ ಮೈಲಿ ದೂರದಲ್ಲಿ ಪೆಂಕಟಾಪುರ ಎನ್ನುವ ಗ್ರಾಮ ಇದೆ. ಅಲ್ಲಿ ಒಂದು ಗಪ್ತ ನಿಧಿ ಇತ್ತು, ಇದನ್ನು ಈ ಸಾಧು ಯಾರಿಗೋ ತೋರಿಸಿದ, ನುಳಿವ ಪೋಲೀಸರಿಗೆ ನಮಗೂ ಕೂಡ ಅದರ ಪಾಲು ಬರಬೇಕು, ಆದ್ದರಿಂದ ನಮಗೂ ಅದನ್ನು ತೋರಿಸು ಎಂದು ಅವನನ್ನು ಹಿಡಿದು 13-14 ದಿವಸ ಪೋಲೀಸ್ ಠಾಣೆಯಲ್ಲಿ ಇಟ್ಟುಕೊಂಡಿದ್ದಾರೆ.

Mr. DEPUTY SPEAKER.—The hon member should not try to raise a discussion. The Notice is with me and it is very clear. I want to hely the hon. member. Let him not get confused by elaborating it.

ಶ್ರೀ ಸಿ. ಬೈರೇಗೌಡ.—ನಾನು ಕನ್‌ಫ್ಯೂಷನ್ ಮಾಡಿಕೊಳ್ಳುತ್ತಿಲ್ಲ, ನೋಟೀಸನಲ್ಲಿ ಇದನ್ನು ನಾನು ತಿಳಿಸಿಲ್ಲ, ಇದು ಇಲ್ಲಿ ಜರ್ಜಿಯಾಗಬೇಕಾಗಿದೆ, ಅಲ್ಲಿ ಮಣಗಟ್ಟಲೆ ಬಂಗಾರ ಇದೆ ಎಂದು ಹೇಳುತ್ತಿದ್ದಾರೆ,

ಉಪಾಧ್ಯಕ್ಷರು,—ಇದನ್ನು ಕಾಲ್ ಅಟೆನ್‌ಷನ್ ನೋಟೀಸ್ ಆಗಿ ಮಾಡಿ ತೆಗೆದುಕೊಳ್ಳೋಣ

ಶ್ರೀ ಸಿ. ಬೈರೇಗೌಡ.—ಅಲ್ಲಿ ಹಣವನು ಇದೆ ಎನ್ನುವುದು ನಮಗೆ ಗೊತ್ತಿಲ್ಲ, ಆದಷ್ಟು ಬೇಗ ತಾವು ಇದರ ಬಗ್ಗೆ ಸರ್ಕಾರದ ಕಡೆಯಿಂದ ಒಂದು ಸ್ಟೇಟ್‌ಮೆಂಟ್ ಕೊಡಿಸುವುದಕ್ಕೆ ಸಹಾಯ ಮಾಡಬೇಕು.

Alleged police excesses on Students in Tiptur

ಶ್ರೀ ಟಿ. ಎಂ. ಮಂಜುನಾಥ್.—ನಾನೂ ಕೂಡ ಒಂದೆರಡು ಕಾಲ್ ಅಟೆನ್‌ಷನ್ ನೋಟೀಸ್ ಅನ್ನು ಕಳುಹಿಸಿದ್ದೇನೆ.ಬೆಲೆಗಳ ಏರಿಕೆಯ ವಿರುದ್ಧ ತಿಪಟೂರಿನಲ್ಲಿ ಪ್ರತಿಭಟನೆ ನಡೆದಂಥ ಸಮಯದಲ್ಲಿ ಘರ್ಷಣೆಯಾಗಿ, ಪೋಲೀಸರು ನಿರಪರಾಧಿಗಳಾದ ವಿದ್ಯಾರ್ಥಿಗಳ ಮೇಲೆ ಮೊಕದ್ದಮೆ ಹೂಡಿ ಕೋರ್ಟಿಗೆ ಹಾಕಿದ್ದಾರೆ. ವಿದ್ಯಾರ್ಥಿಗಳು ನಿರಪರಾಧಿಗಳು, ಅಂಥವರ ಮೇಲೆ ಮೊಕದ್ದಮೆ ಹೂಡಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರದವರು ಒಂದು ಆದೇಶವನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಎಲ್ಲೆಲ್ಲಿ ಗಲಭೆಗಳು ಆಗಿದೆ, ಅದಕ್ಕೆ ಸಂಬಂಧಪಟ್ಟ ಕೇಸುಗಳನ್ನು ವಾಪಸ್ ತೆಗೆದು ಕೊಳ್ಳಬೇಕು ಎಂದು ಆದೇಶಕೊಟ್ಟಿದ್ದಾರೆ. ಈ ಬಗ್ಗೆ ನಾನು ಪೋಲೀಸ್ ಅಧಿಕಾರಿಗಳೊಡನೆ ಸಮಾಲೋಚನೆ ನಡೆಸಿದಾಗ, ನಾವು ಕೇಸ್ ಹಾಕಿಬಿಟ್ಟಿದ್ದೇವೆ, ಇದರ ಬಗ್ಗೆ ಸರ್ಕಾರದಿಂದ ಆದೇಶ ಬರಬೇಕು ಎಂದು ಹೇಳುತ್ತಾರೆ. ವಿದ್ಯಾರ್ಥಿಗಳು ಎಕ್ಸಾಮಿನೇಷನ್‌ಗೆ ಕೂತುಕೊಳ್ಳಬೇಕೆನ್ನುವ ಸಮಯದಲ್ಲಿ ಕೋರ್ಟಿಂದ ಇವರಿಗೆ ಕರೆ ಬಂದಿದೆ. ದಯವಿಟ್ಟು ಸರ್ಕಾರದವರು ಈ ಬಗ್ಗೆ ಕೂಡಲೇ ಗಮನಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ನೋಡುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ್.—ನಾನು ಇದರ ತೀವ್ರತೆಯನ್ನು ತಮಗೆ ತಿಳಿಸಿದ್ದೇನೆ. ವಿದ್ಯಾರ್ಥಿಗಳು ಪರೀಕ್ಷೇ ಹೋಗಬೇಕೇ, ಅಥವಾ ಕೋರ್ಟಿಗೆ ಹೋಗಬೇಕೇ ? ವಿದ್ಯಾರ್ಥಿಗಳು ನಿರಪರಾಧಿಗಳು ಆಗಿರಬೇಕಾದರೆ, ಕೂಡಲೇ ಈ ಬಗ್ಗೆ ಹೇಳಿಕೆ ಕೊಟ್ಟು ಮೊಕದ್ದಮೆಯನ್ನು ವಾಪಸ್ ತೆಗೆದುಕೊಳ್ಳುವಂತೆ ಮಾಡಬೇಕು. ಅವರಿಗೆ ಏನಾದರೂ ಒಂದು ಪರಿಹಾರವನ್ನು ಕೊಡಲೇಬೇಕಾಗಿದೆ. ವಿದ್ಯಾರ್ಥಿಗಳಿಗಿ ಎಕ್ಸಾಮಿನೇಷನ್ ಹ್ಯೂಂನಲ್ಲಿ ನೋಟೀಸ್ ಕೊಟ್ಟಿದ್ದಾರೆ. ಈ ಸಭೆಯಲಿ ಉಪನಾಯಕರು ಇದ್ದಾರೆ, ಇದರ ಬಗ್ಗೆ ಅವರು ಏನಾದರೂ ಹೇಳಿಕೆಯನ್ನು ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಇದು ಬಹಳ ಗಹನವಾದ ವಿಷಯ.

ಶ್ರೀ ಪಿ. ಮುನಿಯಪ್ಪ.—ಮುಳುಬಾಗಿಲು ತಾಲೂಕಿನ ಹಳ್ಳಿಯಲ್ಲಿ ಈ ಸಾಧುವನ್ನು ಕೊಂದು ಬಾವಿಯಲ್ಲಿ ಹಾಕಿದ್ದಾರೆ. ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು ಎಂದು ಹೇಳುತ್ತೇನೆ.

Construction of a new Road in Mandya against the orders of the P. W. D. Authorities

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಕಳೆದ ವಾರ ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ತಮ್ಮ ಕಡೆ ಕಳುಹಿಸಿದ್ದೆ. ವಿಚಾರ ಏನು ಎಂದರೆ ಲೋಕೋಪಯೋಗಿ ಸಚಿವರ ಹುಕುಂ ವಿೀರಿ ಮಂಡ್ಯ ಜಿಲ್ಲೆಯಲ್ಲಿ ಒಂದು ರಸ್ತೆಯನ್ನು ಪೋಲೀಸರ ಸಹಾಯದಿಂದ ಮಾಡಿದ್ದಾರೆ. ಅಲ್ಲಿ ಒಂದು ಹಳ್ಳ ಮುಚ್ಚಬೇಡಿ ಎಂದು ಹೇಳಿದ್ದರೂ, ಕೋರ್ಟ್ ಆಜ್ಞೆ ಸಹ ಮುಚ್ಚಕೂಡದು ಎಂದು ಆಗಿದ್ದರೂ ಈ ಎರಡು ಆಜ್ಞೆಗಳಿಗೆ ವಿರೋಧವಾಗಿ ಸ್ಥಳೀಯ ಅಧಿಕಾರಿಗಳು ರಸ್ತೆ ಮಾಡಿ ಮುಗಿಸಿದ್ದಾರೆ. ರಿಸರ್ವ ಪೋಲೀಸ್ ಸಹಾಯದಿಂದ ರಸ್ತೆ ಮಾಡಿದ್ದಾರೆ. ಆ ರಸ್ತೆಯನ್ನು ಒಬ್ಬ ವ್ಯಕ್ತಿಯ ಅನುಕೂಲಕ್ಕೋಸ್ಕರ ಮಾಡಿಕೊಟ್ಟಿದ್ದಾರೆ. ನಾಳೆ ದಿವಸ ಈ ಒಂದು ಕಾರಣದಿಂದ ಸಾರ್ವಜನಿಕರಿಗೆ ಅನಾನುಕೂಲ ಆದರೂ ಒಬ್ಬ ಮನುಷ್ಯನಿಗೆ ಸಹಾಯ ಮಾಡಬೇಕು ಎಂಬ ದೃಷ್ಟಿಯಿಂದ